2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.96/2023

ದೋ.ಸಾ. 1
ಫ್ರಾ.ಸಾ. 1
ಪ್ರ.ವ.ಬೊ.ದಿನಾಂಕ. 26-11-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಶಾರೂಕ್ ಖಾನ್ |
| ತಂದೆ / ಗಂಡನ ಹೆಸರು | - | ಇಮಾಮ್ ಖಾನ್ |
| ವಯಸ್ಸು | - | 33 |
| ಉದ್ಯೋಗ | - | ವೀಡಿಯೋ ಗ್ರಾಪರ್ |
| ವಾಸ ಸ್ಥಳ | - | ಮಲೆಬೆನ್ನೂರು |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ.11 ನನ್ನ ತಮ್ಮ. ನನಗೆ ಚಾ.ಸಾ.8 ರಿಂದ 10 ಹಾಗೂ 12 ರವರ ಪರಿಚಯ ಇರುತ್ತದೆ. ಅದೇ ರೀತಿ ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. 1 ನೇ ಆರೋಪಿಯು ನನ್ನ ಬಳಿ ರೂಪಾಯಿ 15 ಸಾವಿರ ಕೈಗಡವಾಗಿ ತೆಗೆದುಕೊಂಡಿದ್ದರು. ನಂತರ 2021 ರ 7 ನೇ ತಿಂಗಳಿನ ಒಂದು ದಿನ 1 ನೇ ಆರೋಪಿಯು ರಾತ್ರಿ 10-30 ರ ನಂತರ ನನ್ನ ಮೊಬೈಲ್ ನಂಬರ್ ಆದ 8095718480 ಗೆ ದೂರವಾಣಿ ಮಾಡಿ ಮಲೆಬೆನ್ನೂರಿನ ಪದವಿ ಪೂರ್ವ ಕಾಲೇಜಿನ ಬಾಪೂಜಿ ಹಾಲಿನ ಹತ್ತಿರ ಬರುವಂತೆ ತಿಳಿಸಿರುತ್ತಾನೆ. ನಂತರ ನಾನು ಸದರಿ ಸ್ಥಳಕ್ಕೆ ಹೋಗಿ 1 ನೇ ಆರೋಪಿಯ ಬಳಿ ಹೋಗಿ ಯಾಕೆ ಕರೆದಿದ್ದೀಯಾ ಎಂದು ಕೇಳಿದಾಗ ಆತ ಮತ್ತು ಆತನ ಜೊತೆ ಇದ್ದ 2 ನೇ ಆರೋಪಿಯು ಸೇರಿಕೊಂಡು ನಾನು 1 ನೇ ಆರೋಪಿಗೆ ನೀಡಿದ 15 ಸಾವಿರ ರೂಪಾಯಿಗಳ ಕುರಿತು ಊರಿನಲ್ಲಿ ಅಪಪ್ರಚಾರ ಮಾಡಿಕೊಂಡು ತಿರುಗಾಡುತ್ತೀಯಾ ಎಂದು ಹೇಳುತ್ತ ಒಮ್ಮೆಲೆ ನನಗೆ ಅವಾಚ್ಯ ಶಬ್ದಗಳಿಂದ ಸೂಳೇಮಗನೆ, ಚಿನಾಲ್ಕೆ ಎಂದು ಬೈಯ್ಯಲು ಆರಂಭಿಸಿರುತ್ತಾರೆ.

ನಂತರ 1 ನೇ ಆರೋಪಿಯು ಒಂದು ಕಟ್ಟಿಗೆಯಿಂದ ನನ್ನ ಬಲಕೈಗೆ, ಬೆನ್ನಿಗೆ, ಕಾಲಿನ ಬಳಿ ಹಲ್ಲೆ ಮಾಡಿರುತ್ತಾನೆ. ಅಲ್ಲದೇ ಒಂದು ಕಬ್ಬಿಣದ ರಾಡಿನಿಂದ 1 ನೇ ಆರೋಪಿಯು ನನ್ನ ತಲೆಯ ಮೇಲೆ ಹಲ್ಲೆ ಮಾಡಿರುತ್ತಾನೆ. ತಲೆಗೆ ಹಲ್ಲೆ ಮಾಡಿದ ಕಾರಣ ನಾನು ಕೆಳಗೆ ಬಿದ್ದಿರುತ್ತೇನೆ. ಅಲ್ಲದೇ ಆ ಸಮಯದಲ್ಲಿ 2 ನೇ ಆರೋಪಿಯು ಕೂಡ ನನಗೆ ಪುನಃ ರಾಡನ್ನು ತೆಗೆದುಕೊಂಡು ಹಲ್ಲೆ ಮಾಡಿರುತ್ತಾನೆ. ನಂತರ ನನಗೆ ಅವರಿಬ್ಬರು ಸೇರಿಕೊಂಡು ಮಲೆಬೆನ್ನೂರಿನ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ದಾಖಲುಪಡಿಸಿರುತ್ತಾರೆ. ಅಲ್ಲದೇ ಆರೋಪಿತರು ನನ್ನ ತಮ್ಮ ಚಾ.ಸಾ.11 ರವರಿಗೆ ದೂರವಾಣಿ ಮಾಡಿ ಯಾರೋ ನನಗೆ ಹಲ್ಲೆ ಮಾಡಿದ್ದಾರೆ, ಆಸ್ಪತ್ರೆಗೆ ಸೇರಿಸಿದ್ದೇವೆ ಎಂದು ಹೇಳಿರುತ್ತಾರೆ. ನಂತರ ಆಸ್ಪತ್ರೆಗೆ ಬಂದ ನನ್ನ ತಮ್ಮ ಚಾ.ಸಾ.11 ಸದರಿ ಆಸ್ಪತ್ರೆಯಿಂದ ಆ್ಯಂಬುಲೆನ್ಸ್ ಮೂಲಕ ಚಿಗಟೇರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲಿಸಿರುತ್ತಾನೆ. ಸದರಿ ಆಸ್ಪತ್ರೆಯಲ್ಲಿ ನನ್ನ ತಲೆಗೆ ಒಟ್ಟು 13 ಹೊಲಿಗೆಯನ್ನು ಹಾಕಿರುತ್ತಾರೆ. ನಂತರ ಒಂದು ದಿನ ನಾನು ಚಿಕಿತ್ಸೆ ಪಡೆದು 12 ನೇ ತಾರೀಖಿನಂದು ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ತಾನು ಸಲ್ಲಿಸಿದ ದೂರನ್ನು ನೋಡಿ

ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ಆರೋಪಿತರು ನನ್ನ ತಲೆಗೆ ಹಲ್ಲೆ ಮಾಡಿದ ಕಾರಣ ನನ್ನ ತಲೆಯಿಂದ ರಕ್ತ ಬಂದಿದ್ದು, ಅದು ಸ್ಥಳದಲ್ಲಿ ಹಾಗೂ ನಾನು ಧರಿಸಿದ್ದ ಬಟ್ಟೆಗಳಿಗೂ ಕೂಡ ತಾಗಿದ್ದವು. ಆರೋಪಿತರು ನನ್ನನ್ನು ಕೊಲೆ ಮಾಡಬೇಕು ಎಂಬ ಉದ್ದೇಶದಿಂದಲೇ ನನ್ನ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿರುತ್ತಾರೆ. ನನಗೆ ಆರೋಪಿತರು ಹಲ್ಲೆಗೆ ಉಪಯೋಗಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಆರೋಪಿತರ ಪರ ವಕೀಲರ ಸಮಕ್ಷಮದಲ್ಲಿ ಒಂದು ಬಿಳಿಯ ಚೀಲದಲ್ಲಿ ಅರಗು ಸೀಲು ಹಾಕಿ ಇಟ್ಟಿರುವ ವಸ್ತುವನ್ನು ತೆಗೆದು ತೋರಿಸಲಾಗಿದ್ದು, ಅದರಲ್ಲಿ ಒಂದು ಕಟ್ಟಿಗೆ ಕಂಡುಬಂದಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಅದನ್ನು ಇಡಲಾದ ಚೀಲವನ್ನು ಮು.ಮಾ.2 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಈಗ ಆರೋಪಿತರ ಪರ ವಕೀಲರ ಸಮಕ್ಷಮದಲ್ಲಿ ಒಂದು ಬಿಳಿಯ ಚೀಲದಲ್ಲಿ ಅರಗು ಸೀಲು ಹಾಕಿ ಇಟ್ಟಿರುವ ವಸ್ತುವನ್ನು ತೆಗೆದು ತೋರಿಸಲಾಗಿದ್ದು, ಅದರಲ್ಲಿ ಒಂದು ಕಬ್ಬಿಣದ ರಾಡು ಕಂಡುಬಂದಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು. ಅದನ್ನು ಇಡಲಾದ ಚೀಲವನ್ನು ಮು.ಮಾ.4 ಎಂದು ಗುರುತಿಸಲಾಯಿತು.

ತದನಂತರ ನಾನು ನನ್ನ ರಕ್ತ ತಾಗಿರುವ ಬಟ್ಟೆಗಳನ್ನು ಮಲೆಬೆನ್ನೂರು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ನೀಡಿರುತ್ತೇನೆ. ಆ ಸಮಯದಲ್ಲಿ ಪೋಲೀಸರು ದಾಖಲೆ ಬರೆದು ಸದರಿ ಬಟ್ಟೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಮಹಜರನ್ನು ನಿ.ಪಿ.2 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಯು ಗುರುತಿಸಿದ ಒಂದು ಪೋಟೋವನ್ನು ನಿ.ಪಿ.3 ಎಂದು ಗುರುತಿಸಲಾಯಿತು. ನಾನು ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಆರೋಪಿತರ ಪರ ವಕೀಲರ ಸಮಕ್ಷಮದಲ್ಲಿ ಒಂದು ಬಿಳಿಯ ಚೀಲದಲ್ಲಿ ಅರಗು ಸೀಲು ಹಾಕಿ ಇಟ್ಟಿರುವ ವಸ್ತುವನ್ನು ತೆಗೆದು ತೋರಿಸಲಾಗಿದ್ದು, ಅದರಲ್ಲಿ ಒಂದು ಟೀಶರ್ಟ್ ಕಂಡುಬಂದಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.5 ಎಂದು ಗುರುತಿಸಲಾಯಿತು. ಅದನ್ನು ಇಡಲಾದ ಚೀಲವನ್ನು ಮು.ಮಾ.6 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಈಗ ಆರೋಪಿತರ ಪರ ವಕೀಲರ ಸಮಕ್ಷಮದಲ್ಲಿ ಒಂದು ಬಿಳಿಯ ಚೀಲದಲ್ಲಿ ಅರಗು ಸೀಲು ಹಾಕಿ ಇಟ್ಟಿರುವ ವಸ್ತುವನ್ನು ತೆಗೆದು ತೋರಿಸಲಾಗಿದ್ದು, ಅದರಲ್ಲಿ ಒಂದು ಜೀನ್ಸ್ ಪ್ಯಾಂಟ್ ಕಂಡುಬಂದಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.7 ಎಂದು ಗುರುತಿಸಲಾಯಿತು. ಅದನ್ನು ಇಡಲಾದ ಚೀಲವನ್ನು ಮು.ಮಾ.8 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.5 ಕ್ಕೆ ರಕ್ತ ತಾಗಿದೆ ಎಂದು ನೋಡಿ ಗುರುತಿಸಿರುತ್ತಾರೆ. ಈ ಕುರಿತು ನಾನು ಪೋಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ಅದನ್ನು ನಾನು ಹರಿಹರದ ಡಿಆರ್ ಎಂ ಪದವಿ ಪೂರ್ವ ಕಾಲೇಜಿನಲ್ಲಿ ಓದಿರುತ್ತೇನೆ. ಈ ಪ್ರಕರಣದ ದೋಷರೋಪಣಾ ಪಟ್ಟಿಯಲ್ಲಿ ತೋರಿಸಿರುವ ಚಾ.ಸಾ.2 ರಿಂದ 10

ಮತ್ತು 12 ರವರು ಪರಿಚಯಸ್ಥರು ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಬಾಪೂಜಿ ಹಾಲಿನ ಬಳಿ ಇರುವ ಕಾಲೇಜು ಸರ್ಕಾರಿ ಪದವಿ ಪೂರ್ವ ಕಾಲೇಜು ಎಂದರೆ ಸರಿ. ಸದರಿ ಬಾಪೂಜಿ ಹಾಲ್ ಸದರಿ ಕಾಲೇಜಿಗೆ ಸೇರಿದ ಹಾಲ್ ಎಂದರೆ ಸರಿ. ಸದರಿ ಹಾಲ್ ಸುಮಾರು 50 ವರ್ಷ ಹಳೆಯ ಕಟ್ಟಡವಾಗಿದ್ದು, ಬಿದ್ದು ಪಾಳು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಹಾಲಿನ ಎದುರುಗಡೆ ಹೊಸದಾದ ಕಟ್ಟಡ ಕಟ್ಟಲಾಗಿದೆ ಎಂದರೆ ಸರಿ. ಸದರಿ ಹಾಲಿನ ಎಡಕ್ಕೆ ಹಾಸ್ಟೆಲ್ ಇದೆ ಎಂದರೆ ಸರಿ. ಅದರ ಹಿಂ ದುಗಡೆ ನಾಡಕಛೇರಿ ಹಾಗೂ ಪುರಸಭೆ ಇದೆ ಎಂದರೆ ಸರಿ. ಸದರಿ ಪುರಸಭೆಯ ಪಕ್ಕದಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಸದರಿ ಬಾಪೂಜಿ ಹಾಲಿನ ಪಕ್ಕದಲ್ಲಿ ಬೀರಲಿಂಗೇಶ್ವರ ಬಾಲಕರ ಪ್ರೌಢಶಾಲೆ ಹಾಗೂ ಬಾಲಕಿಯ ಪ್ರೌಢಶಾಲೆಗಳು ಇರುತ್ತವೆ. ಅಲ್ಲದೇ ಸದರಿ ಹಾಲಿನ ಎದುರುಗಡೆ ಬೀರಲಿಂಗೇಶ್ವರ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕ್ ಕೂಡ ಇದೆ ಎಂದರೆ ಸರಿ. ಸದರಿ ಶಾಲೆಯು ನಗರದ ಮಧ್ಯಭಾಗದಲ್ಲಿ ಇದ್ದ ಕಾರಣ ರಾತ್ರಿಯ ಸಮಯದಲ್ಲಿಯೂ ಜನರು ಅಲ್ಲಿ ಓಡಾಡುತ್ತಿರುತ್ತಾರೆ ಎಂದರೆ ಸರಿ. ಸದರಿ ಬಾಪೂಜಿ ಹಾಲಿನ ಸ್ವಲ್ಪ ದೂರದಲ್ಲಿ ಜಿಗಳಿ ಬಸ್ಸ್ಟ್ಯಾಂಡ್ ಹಾಗೂ ವಾಸದ ಮನೆಗಳು ಇವೆ ಎಂದರೆ ಸರಿ.

ನಾನು ಮತ್ತು ಆರೋಪಿತರು ಬಹಳ ವರ್ಷಗಳಿಂದ ಪರಿಚಯಸ್ಥರು ಎಂದರೆ ಸರಿ. 1 ನೇ ಆರೋಪಿಯು ಮಲೆಬೆನ್ನೂರು ಗ್ರಾಮದ ಸಂತೆಯ ಹತ್ತಿರ ಕೇರಂ ಬೋರ್ಡ್ ಕ್ಲಬ್ ಇಟ್ಟುಕೊಂಡು ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ. ನಾನು ಕೂಡ ಮೊದಲು ಕೆಲಸ ಇಲ್ಲದೇ ಇದ್ದ ಸಮಯದಲ್ಲಿ ಸದರಿ ಕ್ಲಬ್ ಗೆ ಹೋಗಿ ಕೇರಂ ಬೋರ್ಡ ಆಟ ಆಡುತ್ತಿದ್ದೆ ಎಂದರೆ ಸರಿ. ಆ ಸಂದರ್ಭಗಳಲ್ಲಿ ನಾನು 1 ನೇ ಆರೋಪಿಗೂ ಆತ ನನಗೂ ದೂರವಾಣಿ ಮಾಡುತ್ತ ಸಂಪರ್ಕದಲ್ಲಿ ಇದ್ದೆವು ಎಂದರೆ ಸರಿ. ನನಗೆ ಮಹಮ್ಮದ್ ಆಲೀದ್, ಶೌಕತ್, ಶಾಹಿದ್, ಶೇಖ್ ಅಕ್ತರ್ ಮತ್ತು ವಜೀರ್ ಖಾನ್ ಎನ್ನುವವರ ಪರಿಚಯ ಇರುತ್ತದೆ ಎಂದರೆ ಸಾಕ್ಷಿಯು ವಜೀರ್ ಖಾನ್ ಮಾತ್ರ ಪರಿಚಯ ಇದೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಸ್ವತಃ ಮುಂದುವರೆದು ಶೇಖ್ ಅಕ್ತರ್ ನ ಪರಿಚಯ ಸ್ವಲ್ಪ ಇದೆ ಎಂದು ನುಡಿದಿರುತ್ತಾರೆ. ಶೇಖ್ ಅಕ್ತರ್ ಇವರು ನಾನು ಬಡ್ಡಿ ವ್ಯವಹಾರ ನಡೆಸುತ್ತೇನೆ ಎಂದು ಪೋಲೀಸರಿಗೆ ದೂರು ಸಲ್ಲಿಸಿದ್ದರು ಎಂದರೆ ಸರಿ. ಆ ಕುರಿತಾಗಿ ಪೋಲೀಸರು ನನ್ನನ್ನು ಕರೆಯಿಸಿ ಬಡ್ಡಿ ವ್ಯವಹಾರ ನಡೆಸದಂತೆ ವಾರ್ನ ಮಾಡಿರುತ್ತಾರೆ ಎಂದರೆ ಸರಿ.

ನಾನು 1 ನೇ ಆರೋಪಿಗೆ 15 ಸಾವಿರ ರೂಪಾಯಿ ಹಣ ನೀಡಿದ ಕುರಿತು ಯಾವುದೇ ದಾಖಲೆಯನ್ನು ಪೋಲೀಸರಿಗೆ ದೂರಿನ ಜೊತೆ ನೀಡಿದ್ದು ಇರುವುದಿಲ್ಲ. ನಾನು ಆರೋಪಿತರು ಹಲ್ಲೆ ಮಾಡಿದ್ದಾರೆ ಎಂದು ಹೇಳುವ ಸಮಯದಲ್ಲಿ ಬೊಬ್ಬೆ ಹೊಡೆದು ಅಕ್ಕಪಕ್ಕದ ಜನರನ್ನು ಸೇರಿಸುವ ಪ್ರಯತ್ನ ಮಾಡಿರುತ್ತೇನೆ. ಆ ಸಮಯದಲ್ಲಿ ಸದರಿ ಸ್ಥಳದ ಹತ್ತಿರವಿದ್ದ ಹಾಸ್ಟೇಲ್ ನ ವ್ಯಕ್ತಿಗಳು ಹಾಗೂ ಅಕ್ಕಪಕ್ಕದವರು ಬಂದು ಜಗಳವನ್ನು ಬಿಡಿಸಿದ್ದು ಇರುವುದಿಲ್ಲ. ನಾನು ದೂರಿನಲ್ಲಿ ಹಾಗೂ ಮರುಹೇಳಿಕೆಯಲ್ಲಿ 2 ನೇ ಆರೋಪಿಯು ನನಗೆ ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿದ್ದಾನೆ ಎಂದು ಹೇಳಿರುತ್ತೇನೆ. ನಾನು ಈ ವಿಷಯವನ್ನು ದೂರು ಹಾಗೂ ಮರುಹೇಳಿಕೆಯಲ್ಲಿ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ಮರುಹೇಳಿಕೆಯನ್ನು ದೂರು ಸಲ್ಲಿಸಿದ ಎರಡು ದಿನಗಳ ನಂತರ ನೀಡಿರುತ್ತೇನೆ. ನಾನು ದೂರಿನಲ್ಲಿ ಇನ್ನೊಬ್ಬ ವ್ಯಕ್ತಿ ಇದ್ದ ಎಂದು ಹೇಳಿದ್ದು, ನನಗೆ ಆತನ ಪರಿಚಯ ಇರುವುದಿಲ್ಲ. ಆದರೆ ಆತ 1 ನೇ ಆರೋಪಿ ಯ ತಮ್ಮ ಶೇರ್ ಅಲಿ ಇರಬಹುದು. ನಾನು ದೂರಿನಲ್ಲಿ ಹಾಗೂ ಮರುಹೇಳಿಕೆಯಲ್ಲಿ ಸದರಿ ಶೇರ್ ಅಲಿ ಇದ್ದ ಕುರಿತು

ಹೇಳಿರುತ್ತೇನೆ. ಸದರಿ ವ್ಯಕ್ತಿ ಕೂಡ ಇದ್ದ ಎಂದು ನಾನು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಮರುಹೇಳಿಕೆ ನೀಡುವಾಗ ಘಟನೆಯು ದಿಃ 12-07-2021 ರಂದು ರಾತ್ರಿ 11-00 ಗಂಟೆ ಸಮಯದಲ್ಲಿ ನಡೆದಿರುತ್ತದೆ ಎಂದು ಹೇಳಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಅದೇ ರೀತಿ ನಾನು ನನ್ನ ಮರುಹೇಳಿಕೆಯಲ್ಲಿ ದಿಃ 12-07-2021 ರಂದು ರಾತ್ರಿ 10-00 ರಿಂದ 10-30 ಗಂಟೆ ಸಮಯದಲ್ಲಿ ಮಲೆಬೆನ್ನೂರಿನ --------------- ದೂರು ನೀಡಿರುವುದು ಸರಿಯಷ್ಟೇ ಎಂದು ಹೇಳಿಕೆ ನೀಡಿರುತ್ತೇನೆ.

ನಾನು ಆಸ್ಪತ್ರೆಯಲ್ಲಿ ಒಂದು ದಿನಗಳ ಕಾಲ ಇದ್ದು ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ದೂರು ನಾನು ಹೇಳಿದಂತೆ ಬೆರಳಚ್ಚು ಮಾಡಲಾಗಿದ್ದು, ಆದರೆ ಯಾರು ಮಾಡಿದ್ದಾರೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಪೋಲೀಸರಿಗೆ ನಿ.ಪಿ.1 ಯಾರು ಬೆರಳಚ್ಚು ಮಾಡಿದ್ದಾರೆ ಎಂದು ಹೇಳಿರುವುದಿಲ್ಲ. ಸದರಿ ದೂರನ್ನು ನಾನು ರಾತ್ರಿ 9-00 ಗಂಟೆಯ ಸಮಯದಲ್ಲಿ ಹೋಗಿ ನೀಡಿರುತ್ತೇನೆ. ಆ ಸಮಯದಲ್ಲಿ ನಾವು ನಾಲ್ಕೈದು ಜನ ಹೋಗಿದ್ದು, ಅದರಲ್ಲಿ ನನ್ನ ಮಾವ ಜಾಕೀರ್ ಖಾನ್ ಎನ್ನುವವರು ಕೂಡ ಇದ್ದರು. ನಾನು ದೂರು ಕೊಡುವ ಪೂರ್ವದಲ್ಲಿ ಪೋಲೀಸರು ಆರೋಪಿತರನ್ನು ಕರೆಯಿಸಿ ವಿಚಾರಿಸಿದ್ದು ಇರುವುದಿಲ್ಲ. ನಾನು ಠಾಣೆಗೆ ಹೋದ ಒಂದು ತಾಸಿನ ಅವಧಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ನಿ.ಪಿ.1 ರಲ್ಲಿ ದಿಃ 12-07-2021 ರಂದು ರಾತ್ರಿ 9-00 ಗಂಟೆಗೆ ಪ್ರಕರಣ ದಾಖಲಿಸಿಕೊಂಡ ಕುರಿತು ಬರೆಯಲಾಗಿರುತ್ತದೆ.

ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ ದಿಃ 11-07-2021 ರಂದು ಹಣದ ವಿಷಯಕ್ಕೆ ಸಂಬಂಧಿಸಿ ಆರೋಪಿತರು ನನ್ನನ್ನು ಕರೆಯಿಸಿ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕಟ್ಟಿಗೆ ಹಾಗೂ ರಾಡಿನಿಂದ ಹಾಗೂ 2 ನೇ ಆರೋಪಿಯು ರಾಡಿನಿಂದ ನನಗೆ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರ ಮಾಡುತ್ತಿದ್ದು, ಯಾವುದೋ ವ್ಯಕ್ತಿಗಳು ನನಗೆ ಹಲ್ಲೆ ಮಾಡಿ ಹೋಗಿದ್ದು, ಮಾನವೀಯತೆ ದೃಷ್ಟಿಯಿಂದ ಆರೋಪಿತರು ನನ್ನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಮ್ಮ ಸೇರಿಕೊಂಡು ಆರೋಪಿತರಿಗೆ ತೊಂದರೆ ನೀಡಲು ಈ ಸುಳ್ಳು ಪ್ರಕರಣವನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ನನ್ನ ಬಟ್ಟೆಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿ ನೀಡಿದ್ದು, ಆಗ ನಿ.ಪಿ.2 ರಂತೆ ಪಂಚನಾಮೆಯನ್ನು ಬರೆದು, ನಿ.ಪಿ.3 ರಂತೆ ಫೋಟೋ ತೆಗೆದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.11.28 10:28:32 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.